ರಿಜಿಸ್ಟ್ರಾರ್ ಅವರಿಗೆ ನೀವು ಹೇಳಬೇಕು. ಇದು ತಪ್ಪು ಎಂದು ಹೇಳಬೇಕು. He cannot be a party to it. ಅವರ ಮೇಲೆ ತಾವು ಕ್ರಮ ಜರುಗಿಸಬೇಕು.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ನಾನು ಅದನ್ನು ನೋಡಿಸಿದೆ. ಆ ದಿವಸ ನಮ್ಮ ಡೆಪ್ಯೂಟಿ ರಿಜಿಸ್ಟ್ರಾರ್ ಅಬ್ಸೆಂಟ್ ಇದ್ದಾರೆ, ಅವತ್ತು ಈ ನಿರ್ಣಯ ಮಾಡಿಕೊಂಡಿದ್ದಾರೆ.

ಶ್ರೀ ಡಿ.ಟಿ. ಇನಾಂದಾರ್ : ಸಹಕಾರಿ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಅವರು ಹೋದ ವರ್ಷ ಕೂಡ ಈ ಪ್ರೊಸೀಜರ್ ಮಾಡಿದ್ದಾರೆ. ಅದರ ಹಿಂದೆ ಕೂಡ ಮಾಡಿಕೊಂಡು ಬಂದಿದ್ದಾರೆ. ಆಗ ಇದ್ದಂಥ ಡೆಪ್ಯೂಟಿ ರಿಜಿಸ್ಟ್ರಾರ್ should have reported to the Government that this procedure is not correct. They cannot sit over the matter and say that it is right. ಇವರೂ ಕೂಡ ಈ ರೀತಿ ಮಾಡಿದ್ದೇವೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬೇಕಾಗಿತ್ತು, ಆದರೆ ತಂದಿಲ್ಲ.

ಶ್ರೀ ಡಿ.ಆರ್. ಪಾಟೀಲ್ : ಡೆಪ್ಯೂಟಿ ರಿಜಿಸ್ಟ್ರಾರ್ ಆಬ್ಸೆಂಟ್ ಇದ್ದರು, ಅವತ್ತು ಆ ರೀತಿ ಬರೆದು ಕೊಂಡಿದ್ದಾರೆ ಎಂದು ಹೇಳಿದರು. ಬಹುಶಃ ಮ್ಯಾನೇಜಿಂಗ್ ಡೈರೆಕ್ಟರೂ ಡೆಪ್ಯೂಟಿ ರಿಜಿಸ್ಟ್ರಾರೇ ಇರುತ್ತಾರೆಂದು ಕಾಣಿಸುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ನಾನು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ಮೊನ್ನೆದಿವಸ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೈವ್ ಬ್ಯಾಂಡ್ ಕೇಂದ್ರದಲ್ಲಿ ಆದ ಪ್ರಕರಣದಲ್ಲಿ ಒಂದು ಕೊಲೆಯಾಗಿದೆ. 10 ದಿವಸದ ಮುಂಚೆ ಕೋಡಿಹಳ್ಳಿಯಲ್ಲೂ ಕೂಡ ಇದೇ ರೀತಿ ಒಂದು ಬಾರ್ ಸಮೀಪ ಕೊಲೆಯಾಗಿದೆ.

MR. SPEAKER : Hon'ble Member Suresh Kumar, kindly help me. The Home Minister is expected. I will take it up later.

SRI. S. SURESH KUMAR : Yes, sir.

ಉಳ್ಳಾಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗರೆ ಎಂಬ ಪ್ರದೇಶದಲ್ಲಿ ಜಮೀನು ಮತ್ತು ಹಕ್ಕುಪತ್ರ ವಿತರಣೆ

ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೇ ನನ್ನ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಂಗರೆ ಎಂಬ ಪ್ರದೇಶಕ್ಕೆ ಸಂಬಂಧಪಟ್ಟಂತೆ ಹೊಸ ವಿಧಾನ ಸಭಾ ಅಧಿವೇಶನ ಪ್ರಾರಂಭವಾದ ನಂತರ ನಾನು ಇಲ್ಲಿ ಒತ್ತಾಯ ಮಾಡುತ್ತಿದೆ. ರಾಜ್ಯ ಸರ್ಕಾರ ಇತ್ತೀಚೆಗೆ ಅದನ್ನು ಕಂದಾಯ ಗ್ರಾಮವೆಂದು ಘೋಷಣೆ ಮಾಡಿದೆ. ಮಂಗಳೂರು ಮಹಾನಗರಪಾಲಿಕೆಯಲ್ಲಿ ಅಡಳಿತಾತ್ಮಕವಾಗಿ ಸೇರಿಕೊಂಡಿದೆ. ಆದರೆ, ಸಮಸ್ಯೆ ಏನೆಂದರೆ ಕಳೆದ 50 ವರ್ಷಗಳಿಂದ ಅಲ್ಲಿಯ

ಸುಮಾರು 10 ಸಾವಿರ ಜನರಿಗೆ, ಎರಡೂವರೆ ಸಾವಿರ ಮನೆಗಳು ನಿವೇಶನಗಳು ಲಭ್ಯವಾಗಲಿಲ್ಲ. ಯಾವುದೇ ಮನೆ ನಂಬರುಗಳನ್ನು ಕೊಟ್ಟಿರಲಿಲ್ಲ. ಹಕ್ಕುಪತ್ರ ಕೂಡ ಸಿಕ್ಕಿರಲಿಲ್ಲ. ನಾನು ರಾಜ್ಯ ಸರ್ಕಾರದವರಲ್ಲಿ ವಿನಂತಿ ಮಾಡುತ್ತಿದ್ದೇನೆ. ಬಡ ಮೀನುಗಾರರೇ ಹೆಚ್ಚಾಗಿರುವಂಥ ಆ ಪ್ರದೇಶದ ಜನರಿಗೆ, ಈಗ ಕಂದಾಯ ಗ್ರಾಮವೆಂದು ಘೋಷಣೆ ಮಾಡಿದ ನಂತರ ಎಲ್ಲರಿಗೂ ಮನೆ ನಿವೇಶನವನ್ನು ಕೊಡಬೇಕು ಹಕ್ಕು ಪತ್ರ ಕೊಡಬೇಕು. ಅಥವಾ ಅವರಿಗೆ ರೇಷನ್ ಕಾರ್ಡ್ ಸಿಗುವಂಥಾದ್ದು ಮತ್ತು ಬೇರೆ ನಾಗರೀಕ ಸೌಲಭ್ಯಗಳು ಸಿಗುವ ಬಗ್ಗೆ ತಾವು ಹೆಚ್ಚು ಒತ್ತುಕೊಟ್ಟು ಕ್ಷಿಪ್ರಗತಿಯಲ್ಲಿ ಜಾರಿಗೆ ತರಬೇಕು. ಮಂಗಳೂರು ಮಹಾನಗರಪಾಲಿಕೆಯಲ್ಲಿ 1995ರಲ್ಲಿ ಮನೆ ನಿವೇಶನಕ್ಕೋಸ್ಕರ ಬಹಳಷ್ಟು ಜನ ಅರ್ಜಿ ಹಾಕಿದ್ದಾರೆ. ಇಷ್ಟರವರೆಗೆ ಅವರಿಗೆ ಮನೆ ನಿವೇಶನ ಲಭ್ಯವಾಗಲಿಲ್ಲ. ಅರ್ಜಿಯ ಜೊತೆ ಕೊಡಬೇಕಾದ ಎಲ್ಲಾ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಆಶ್ರಯ ಮತ್ತು ಅಂಬೇಡ್ಕರ್ ಮನೆಗಳು ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬಂದ ಅರ್ಜಿಗಳು ವಿಲೇವಾರಿ ಆಗಲಿಲ್ಲ. ದಯವಿಟ್ಟು ಬೆಂಗೆರೆ ಗ್ರಾಮದ ನಿವಾಸಿಗಳಿಗೆ ಮತ್ತು ಮಂಗಳೂರು ಮಹಾನಗರಪಾಲಿಕೆಯಲ್ಲಿ ಉಳಿದಂಥ ಈ ಅರ್ಜಿದಾರರಿಗೆಲ್ಲಾ ಕ್ಷಿಪ್ರಗತಿಯಲ್ಲಿ ಹಕ್ಕುಪತ್ರ ಮತ್ತು ಆಶ್ರಯ ಮತ್ತು ಅಂಬೇಡ್ಕರ್ ಮನೆಗಳ ಜೊತೆಗೆ ಮನೆ ನಿವೇಶನಗಳನ್ನು ಕೊಡಬೇಕೆಂದು ರಾಜ್ಯಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈ ದಿವಸವೇ ಆ ಜಿಲ್ಲೆಯ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಜೊತೆ ಮಾತನಾಡಿ, ಮಧ್ಯಾಹ್ನದೊಳಗಾಗಿ ತಮಗೆ ಉತ್ತರವನ್ನು ಕಳುಹಿಸಿಕೊಡುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಮೆರಿಟ್ ಸೀಟುಗಳನ್ನು ಮಾರಾಟ ಮಾಡಲು ನಿರ್ಧರಿಸುವುದು

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯ ದೇಶದಲ್ಲಿಯೇ ಒಳ್ಳೆಯ ಹೆಸರನ್ನು ಪಡೆದಿರುವ ವಿಶ್ವವಿದ್ಯಾನಿಲಯ. ಆದರೆ, ಈ ವರ್ಷದ ಶೈಕ್ಷಣಿಕ ವರ್ಷದಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾಸ್ಟರ್ ಡಿಗ್ರಿ ಕೋರ್ಸಸ್‌ನ್ನು ಮಾರಾಟಕ್ಕಿವೆ ಎಂದು ವಿಶ್ವವಿದ್ಯಾನಿಲಯ ಉಪಕುಲಪತಿಗಳು ಒಂದು ಸುತ್ತೋಲೆ ಹೊರಡಿಸಿ, ಎಲ್ಲಾ ಇಲಾಖೆಗಳಿಗೂ ಕೂಡ ಕಳುಹಿಸಿಕೊಟ್ಟಿದ್ದಾರೆ. ಜೊತೆಗೆ ಅಲ್ಲಿರುವಂಥ ಪ್ರತಿಯೊಂದು ವಿಭಾಗದಲ್ಲಿಯೂ 25 ಮಾಸ್ಟರ್ ಡಿಗ್ರಿ ಸೀಟ್ಸ್ ಇವೆ. ಅದರಲ್ಲಿ 13 ಸೀಟುಗಳು ರಿಸರ್ವೇಷನ್ ಕೋಟಾದಲ್ಲಿ ಬರುತ್ತದೆ. ಉಳಿದ ಕೇವಲ 12 ಸೀಟುಗಳು ಮೆರಿಟ್‌ಗಾಗಿ ಇರುವಂಥ ಸೀಟುಗಳು. 5 ಸೀಟುಗಳು ವ್ಯಾಪಾರಕ್ಕಾಗಿ ಇವೆ ಎನ್ನುವಂತಾದ್ದನ್ನು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೆ ಹೋಗುವುದರ ಜೊತೆಗೆ, ಇನ್ನೊಂದು ಪ್ರಮುಖವಾದುದೆಂದರೆ ಎಲ್ಲಾ ಸೀಟಿನ ಮೇಲೆ ಇನ್‌ಫ್ರಾಸ್ಟ್ರಕ್ಚರ್ ಸೆಸ್ ಕೂಡ ಹಾಕುವಂಥ ನಿರ್ಣಯವನ್ನೂ ಕೂಡ ಕೈಗೊಂಡಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟಿದೆಯೇ? ಈ ರೀತಿಯಲ್ಲಿ ಮಾಸ್ಟರ್ ಡಿಗ್ರಿ ಕೋರ್ಸುಗಳನ್ನು ಕೂಡ ಮಾರಾಟಕ್ಕೆ ಇಡುವಂಥ ಶೋಚನೀಯ ಪರಿಸ್ಥಿತಿ ಏತಕ್ಕೋಸ್ಕರ ಬಂದಿದೆ ಎನ್ನುವುದರ ಬಗ್ಗೆ ಸರ್ಕಾರದ ಗಮನವನ್ನು ತಮ್ಮ ಮೂಲಕ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ.